Phone No: 080-2333 0984
080-23330149

080-2333 0153 Etxn. 205, 210, 222
registrar@uasbangalore.edu.in

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

**ಕುಲಸಚಿವರ ಕಛೇರಿ, ಜಿ.ಕೆ.ವಿ.ಕೆ. ಬೆಂಗಳೂರು–560065, ಕರ್ನಾಟಕ**

**UNIVERSITY OF AGRICULTURAL SCIENCES, BANGALORE**

Office of the Registrar, GKVK Campus, Bengaluru– 560065, Karnataka

ಕ್ರ.ಸಂ: ಕು.ಸ./ಸಕುಸ/ಎಸ್‌ಎಫ್‌ಎ/ಡಿಪ್ಲೊಮಾ.(ಕೃಷಿ)/ ಡಿಪ್ಲೊಮಾ (ರೇಷ್ಮೆಕೃಷಿ) ಪ್ರವೇಶ/2022-23 ದಿನಾಂಕ: 01.06.2022

## ಅಧಿಸೂಚನೆ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಅಧೀನದಲ್ಲಿರುವ ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ,ಮಂಡ್ಯ/ರೇಷ್ಮೆಕೃಷಿ ಮಹಾವಿದ್ಯಾಲಯ, ಚಿಂತಾಮಣಿಯಲ್ಲಿ **2022-23ನೇ** ಶೈಕ್ಷಣಿಕ ವರ್ಷದಲ್ಲಿ ಎರಡು ವರ್ಷಗಳ ಡಿಪ್ಲೊಮಾ (ಕೃಷಿ)/ಡಿಪ್ಲೊಮಾ (ರೇಷ್ಮೆಕೃಷಿ) [4 ಸೆಮಿಸ್ಟರ್] ಕೋರ್ಸ್‌ಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಬೋಧನಾ ಕ್ರಮ ಮತ್ತು ಮಾಧ್ಯಮ: ಡಿಪ್ಲೊಮಾ (ಕೃಷಿ) ಡಿಪ್ಲೊಮಾ (ರೇಷ್ಮೆಕೃಷಿ)ಯನ್ನು ಕನ್ನಡ ಮಾಧ್ಯಮದಲ್ಲಿ ಸೆಮಿಸ್ಟರ್ ಪದ್ಧತಿಯಲ್ಲಿ ಬೋಧಿಸಲಾಗುವುದು.**

**ಪ್ರವೇಶ ಅರ್ಹತೆ :**

- ಕೃಷಿ ವಿಶ್ವವಿದ್ಯಾನಿಲಯದಲ್ಲಿ ಡಿಪ್ಲೊಮಾ(ಕೃಷಿ)/ಡಿಪ್ಲೊಮಾ(ರೇಷ್ಮೆಕೃಷಿ) ಕೋರ್ಸ್‌ಗೆ ಪ್ರವೇಶ ಕೋರುವ ಅಭ್ಯರ್ಥಿಗಳು
- ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಪಠ್ಯವನ್ನು ಭಾಷೆಯಾಗಿ ಅಭ್ಯಸಿಸಿ ಕನಿಷ್ಠ ಶೇ.45 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು (ಪ.ಜಾ./ಪ.ಪಂ./ಪ್ರವರ್ಗ–I ರವರುಗಳಿಗೆ ಕನಿಷ್ಠ ಶೇ.40 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು).
- ದಿನಾಂಕ. **30.04.2022** ರಂದು ಅಭ್ಯರ್ಥಿಗಳ ವಯಸ್ಸು 19 ವರ್ಷಗಳನ್ನು ಮೀರಿರಬಾರದು.
- ರೈತರ ಹಾಗು ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50ರಷ್ಟು ಸೀಟುಗಳನ್ನು ಡಿಪ್ಲೊಮಾ (ಕೃಷಿ)/ ಡಿಪ್ಲೊಮಾ(ರೇಷ್ಮೆಕೃಷಿ) ಪ್ರವೇಶಾತಿಗೆ ಮೀಸಲಿಡಲಾಗಿದೆ.
- ಅರ್ಜಿ ಹಾಗೂ ಮಾಹಿತಿ ಪುಸ್ತಕವನ್ನು ಕೃಷಿ ವಿಶ್ವವಿದ್ಯಾನಿಲಯ ಜಿ.ಕೆ.ವಿ.ಕೆ., ಬೆಂಗಳೂರು–560065 ವೆಬ್‌ಸೈಟ್ www.uasbangalore.edu.in ನಲ್ಲಿ ದಿನಾಂಕ:**02.06.2022** ರಿಂದ **01.07.2022** ರವರೆಗೆ ಡೌನ್‌ಲೋಡ್ ಮಾಡಬಹುದು. ಈ ರೀತಿ ವೆಬ್‌ಸೈಟ್ ಮುಖಾಂತರ ಪಡೆದು ಭರ್ತಿಮಾಡಿದ ಅರ್ಜಿಗಳನ್ನು, ಅರ್ಜಿಯ ನಿಗದಿತ ಶುಲ್ಕವನ್ನು ಡಿ.ಡಿ. ರೂಪದಲ್ಲಿ ಲಗತ್ತಿಸಿ ದಿನಾಂಕ. **02.07.2022** ರೊಳಗೆ ಕಳುಹಿಸಿಕೊಡಬೇಕು. ದಿನಾಂಕ. **03.07.2022** ರ ನಂತರ ಡಿ.ಡಿ. ಯನ್ನು ಪಡೆದು ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಅರ್ಜಿ ಶುಲ್ಕ:**

- ಸಾಮಾನ್ಯ ವರ್ಗದವರಿಗೆ ರೂ.500/– ಪ.ಜಾ./ಪ.ಪಂ./ಪ್ರವರ್ಗ– I ರವರಿಗೆ ರೂ. 250/– ಆಗಿದ್ದು, ರಾಷ್ಟ್ರೀಕೃತ ಬ್ಯಾಂಕ್‌ಗಳ (Nationalised Bank) ಮೂಲಕ ಡಿ.ಡಿ.ಯನ್ನು **Comptroller, UAS, GKVK, Bangalore-560065** ಇವರ ಹೆಸರಿನಲ್ಲಿ ಪಡೆದು ಎಲ್ಲಾ ಅಗತ್ಯ ಅಡಕಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು **ಕುಲಸಚಿವರು, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು–560065** ಇಲ್ಲಿಗೆ ದಿನಾಂಕ **02.07.2022** ರ (ಸಂಜೆ 4.00 ಗಂಟೆ) ಒಳಗೆ ತಲುಪುವಂತೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದು.
- ದಿನಾಂಕ: 03.07.2022 ರ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಪ್ರವೇಶ ಮತ್ತು ಆಯ್ಕೆ ವಿಧಾನ :**

- ಸರ್ಕಾರದ ಆದೇಶಗಳ ಅನ್ವಯ ಸೀಟುಗಳನ್ನು ಭರ್ತಿ ಮಾಡಲಾಗುವುದು.
- ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯನ್ನು ಅಳವಡಿಸಿ, ಪ್ರವೇಶಕ್ಕೆ ಆಯ್ಕೆ ಮಾಡಿ, ಆಯ್ಕೆಯಾದ ಅಭ್ಯರ್ಥಿಗಳಿಗೆ ಪತ್ರ ಹಾಗೂ ವೆಬ್ ಸೈಟ್ ಮುಖಾಂತರ ತಿಳಿಸಲಾಗುವುದು.

**ಟಿಪ್ಪಣಿ : ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಯಾವುದೇ ಉದ್ಯೋಗ ಭರವಸೆಯ ಆಧಾರದ ಮೇಲೆ ಮೇಲ್ಕಂಡ ಕೋರ್ಸ್‌ನ್ನು ನಡೆಸುವುದಿಲ್ಲ.**

ಆದೇಶದ ಮೇರೆಗೆ

ಕುಲಸಚಿವರು

ಕುಲಸಚಿವರು
ಕೃಷಿ ವಿಶ್ವವಿದ್ಯಾನಿಲಯ
ಗಾ.ಕೃ.ವಿ.ಕೆ., ಬೆಂಗಳೂರು–560 065